◆ **ಕನ್ನಡದ ಪ್ರಮುಖ ಕತೆಗಾರ್ತಿ ನೀವು. ಬಂಡಾಯ ದಲಿತ ಚಳವಳಿಗಳು ತೀವ್ರತೆ ಕಳೆದುಕೊಂಡ ಸಂದರ್ಭದಲ್ಲಿ 'ಲಂಕೇಶ್ ಪತ್ರಿಕೆ' ಮೂಲಕ ಹೊರ ಹೊಮ್ಮಿದ ದಲಿತ ಸಮುದಾಯದ ಅದ್ಭುತ ಪ್ರತಿಭೆ ನೀವು. ಕತೆಗಾರ್ತಿಯಾಗಲು ಪಡೆದ ಪ್ರೇರಣೆ ಮತ್ತು ಪ್ರಭಾವಗಳನ್ನು ತಿಳಿಸಿ.**

ನನ್ನ ಕಥೆಗಳು ಮೊದಲು ಪ್ರಕಟಗೊಂಡದ್ದು, ಆವತ್ತಿನ ಸುದ್ದಿ ಸಂಗಾತಿ ವಾರಪತ್ರಿಕೆಯಲ್ಲೇ ಆದ್ರೂ ನನ್ನೋರ್ವ ಕಥೆಗಾರ್ತಿಯಾಗಿ ರೂಪಿಸಿದ್ದು ಲಂಕೇಶ್ ಪತ್ರಿಕೆ. ಸತ್ಯವಾಗ್ಲು ಹೇಳ್ತೀನಿ ಆಗ ನಂಗೆ ಡಿಎಸ್‌ಎಸ್ ಒಂದೇ ಗೊತ್ತಿದ್ದು ಅಪ್ಪಾಜಿಯಿಂದಾಗಿ. ತುಂಬಾ ಜನ ಬರೋರು, ಆ ಬಗ್ಗೆ ಮನೆಯಲ್ಲೇ ಮಾತುಕತೆ ಚರ್ಚೆ ಆಗ್ತಾ ಇತ್ತು ಹಾಗಾಗಿ. ಅದೂ ಬಂದೋರಿಗೆ ಊಟ, ತಿಂಡಿ, ಕಾಫಿ, ಟೀ ಕೊಡ್ತಾ ಕಿವಿಗೆ ಎಷ್ಟು ಬೀಳ್ತಿತ್ತೋ ಅಷ್ಟೇ. ಬೇರಾವ ಚಳವಳಿಯಾಗಲಿ ಈ ಬಂಡಾಯ, ದಲಿತ, ಸ್ತ್ರೀವಾದ ಇವ್ಯಾವುದರ ಬಗ್ಗೆನೂ ಏನೇನೂ ಗೊತ್ತಿರ್ಲಿಲ್ಲ. ಬರಹಗಾರಳಾಗ್ಬೇಕು, ಕಥೆಗಾರ್ತಿಯಾಗ್ಬೇಕು ಅಂತ ಯಾವತ್ತೂ ಅಂದುಕೊಂಡವಳೂ ಅಲ್ಲ. ಆದರೆ ಬರೆಯೋದು ನನ್ನ ಪ್ಯಾಷನ್ ಆಗಿತ್ತು ಅಷ್ಟೇ. ನನ್ನ ಸುತ್ತಲಿನ ಆಗುಹೋಗುಗಳು, ನನ್ನ ಕಿವಿಗೆ ಬೀಳುತ್ತಿದ್ದ ಕೆಲ ಸಂಗತಿಗಳು ಅವು ನನ್ನೊಳಗೆ ಉಂಟು ಮಾಡುತ್ತಿದ್ದ ತಳಮಳ, ಚಡಪಡಿಕೆ ಕಥೆಗಳಾಗಿ ಹೊರಹೊಮ್ಮಿದುವಷ್ಟೇ. ಈ ಉತ್ಸಾಹದಲ್ಲೇ ನನ್ನ ಮೊದಲ ಕಥೆ ರೂಪಗೊಂಡಾಗ ಮನೆಯಲ್ಲೂ ಯಾರಿಗೂ ತಿಳಿಸದೇ ಸುದ್ದಿಸಂಗಾತಿ ವಾರಪತ್ರಿಕೆಗೆ ಕಳಿಸಿದ್ದೆ; ನೋಡನ ಬರುತ್ತೋ ಇಲ್ವೋ ಅನ್ನೋ ಕುತೂಹಲದಿಂದ. ಆ ಪತ್ರಿಕೆ ನಮ್ಗೆ ತುಂಬಾ ಪರಿಚಿತ ಅನ್ನೋ ಧೈರ್ಯ ಬೇರೆ. ಆ ಪತ್ರಿಕೆ ನಡೆಸ್ತಾ ಇದ್ದೋರೆಲ್ಲಾ ಅಪ್ಪಾಜಿಗೆ ಬಹಳ ಆಪ್ತರು ಆಗ. ನನ್ನ ಮೊದಲ ಮೂರು ಕಥೆಗಳು ಸುದ್ದಿಸಂಗಾತಿಯಲ್ಲಿ ಪ್ರಕಟವಾದ್ಮೇಲೆ ಲೇಖಕ ಬಿ.ವಿ. ವೀರಭದ್ರಪ್ಪನವರು ನಮ್ಮನೆಗೆ ಬಂದು ಲಂಕೇಶ್ ಪತ್ರಿಕೆಗೆ ಒಂದು ಕಥೆ ಬರಿಯಮ್ಮ ಅಂತ ಹೇಳಿಹೋದ್ರು. ಆನಂತರ ನಾನು ಬರೆಯುತ್ತಲೇ ಹೋದೆ. ಇಷ್ಟೇ ಸಮಯದಲ್ಲಿ ಕತೆ ಬರೆದುಬಿಡಬೇಕು ಅನ್ನೋ ನಿರ್ಬಂಧ ಇರ್ಲಿಲ್ಲ. 'ಕಥೆ ಬೇಕು, ಬೇಗ ಬರ್ದು ಕಳ್ಸು...' ಅಂತ ಹೇಳ್ತಾ ಇದ್ದಿದ್ದಷ್ಟೇ. ಬೇಗ ಅಂದ್ರೆ ಕಡಿಮೆ ಅಂದ್ರೂ ಒಂದೆರಡು ತಿಂಗಳು ನಾನು ತಗೊಳ್ತ ಇದ್ದದ್ದು. ಆ ಸ್ಪೇಸ್ ಮತ್ತು ಫ್ರೀಡಂ ಅಲ್ಲಿತ್ತು. ಬರೆಯೋಕೆ ತುಂಬಾ ಖುಷಿಯಾಗ್ತಿತ್ತು. ನಾನದನ್ನ ತುಂಬಾ ಎಂಜಾಯ್ ಮಾಡ್ತಿದ್ದೆ. ಒಂದು ಸಂಗತಿ ನನ್ನನ್ನ ಪೂರ ಆವರಿಸಿಕೊಂಡು ನಾನದರಲ್ಲೇ ಸಂಪೂರ್ಣ ಕಳೆದುಹೋದಾಗಲೇ ಆಗ್ತಾ ಇದ್ದದ್ದು ಕಥೆಯೊಂದರ ಹುಟ್ಟು. ಅದಕ್ಕೆ ಅದರದೇ ಆದ ಒಂದು ಜಾಗ ಮತ್ತು ಸಮಯ ಬೇಕಿತ್ತು. ಆಗ ಅದು ಇತ್ತು. ಇವತ್ತಿನದು ವೇಗದ ಸಾಮ್ರಾಜ್ಯ. ಎಲ್ಲವೂ ವೇಗವಾಗಿಯೇ ಆಗ್ಬೇಕು. ಅದಕ್ಕೆ ತಕ್ಕನಾದ ಪರಿಸರ, ಪರಿಕರ, ತಂತ್ರಜ್ಞಾನ ಎಲ್ಲವೂ ಇದೆ; ಆದರೆ ಅದಕ್ಕೆ ಅಪ್‌ಡೇಟ್ ಆಗ್ಬೇಕಷ್ಟೆ.

◆ **ಕನ್ನಡದ ಸಂದರ್ಭದಲ್ಲಿ ಮಹಿಳಾ ಸಾಹಿತ್ಯ ಎನ್ನುವುದು ಒಂದು ಬೆರಗು ಕೂಡಾ. ಸ್ವಾತಂತ್ರ್ಯಾ ನಂತರದ ಕಾಲದಿಂದ ಈ ವರೆಗೆ ಮಹಿಳಾ ಸಾಹಿತ್ಯ ಹಲವು ಘಟ್ಟಗಳಲ್ಲಿ ಹಾದು ಬಂದಿದೆ. ವರ್ತಮಾನದ ಮಹಿಳಾ ಸಾಹಿತ್ಯ ಹೇಗಿದೆ ಎನ್ನುತ್ತೀರಿ ?**

ತುಂಬಾ ಸ್ಟ್ರಾಂಗ್ ಮತ್ತು ಪವರ್‌ಫುಲ್ ಆಗಿದೆ. ಇವತ್ತಿನ ವಿದ್ಯಮಾನಗಳಲ್ಲಿ ಸಾಮಾಜಿಕ ಪಿಡುಗುಗಳಾಗಿಯೇ ರೂಪಗೊಳ್ತಾ ಇರೋ ಹೆಣ್ಣಿನ ಮೇಲಿನ ಅತ್ಯಾಚಾರ, ಲೈಂಗಿಕ ದೌರ್ಜನ್ಯ, ದೈಹಿಕ ಶೋಷಣೆ, ತಂತ್ರಜ್ಞಾನದ ವೈಪರೀತ್ಯ, ಬೆಣ್ಣೆಯೊಳಗಿನ ಕೂದಲಿನಂತೆ ಗೋಚರಿಸುವ ಹೆಣ್ಣು ಗಂಡಿನ ನಡುವಿನ ಅಸಮಾನತೆ, ನೆಪ ಮಾತ್ರಕ್ಕೆ ಸೌಲಭ್ಯಗಳನ್ನು ಒದಗಿಸುತ್ತಾ ಆಕೆಯನ್ನು ಇನ್ನಷ್ಟು ಕಷ್ಟಕ್ಕೆ ಸಂಕಷ್ಟಕ್ಕೆ ಗುರಿ ಮಾಡುತ್ತಿರುವ ಹುನ್ನಾರ ಈ ಎಲ್ಲದರ ವಿರುದ್ಧದ ಹೋರಾಟ, ರೋಷ, ಆಕ್ರೋಶ, ನೋವು, ಸಂಕಟ, ಪ್ರತಿಭಟನೆ ವರ್ತಮಾನದ ಮಹಿಳಾ ಸಾಹಿತ್ಯಕ್ಕೆ ದನಿಯಾಗಿದೆ.